ತಪ್ಪು ಮನುಷ್ಯನಿಗೆ ಪ್ರಶ್ನೆಯನ್ನು ಕೇಳಿದೆನೆಂದು ಅರಿವಾಯಿತು. ನಿಜ, ಮದುವೆಗಳು ಹಿಂದೆ ಆದಂತೆಯೇ ಇಂದೂ ಸಹ ಆಗುತ್ತಿವೆ. ಎಲ್ಲರ ಮನೆಯಲ್ಲೂ ಸಹ ಹೀಗೆಯೇ ವಿವಾಹಗಳು ನಡೆಯುತ್ತವೆ. ಅಜ್ಜ, ಅಪ್ಪನ ಮದುವೆಯಾದಂತೆ ಮಗನ ಮದುವೆಯೂ ಆಗುತ್ತದೆ. ಆದರೆ ನಮ್ಮ ಪರಿಸ್ಥಿತಿಯೇ ಭಿನ್ನ.

ಡಾಬಾದಲ್ಲಿ ತಿಂದ ನಂತರ ಎದ್ದು ನಿಂತೆ. ಪಿಟ್ಟೂ ಸಾಕಷ್ಟು ಡಿಸ್ಕೌಂಟ್ ಕೊಟ್ಟ; ಮುಂದಿನ ಬಾರಿ ನಿಮ್ಮ ಮಗನನ್ನೂ ಕರೆದುಕೊಂಡು ಬನ್ನಿ ಎಂದ.

ಅಂಶುಲ್ ಕೊನೆಯ ಬಾರಿಗೆ ನನ್ನೊಂದಿಗೆ ಇಲ್ಲಿಗೆ ಯಾವಾಗ ಬಂದಿದ್ದ? ಬಹುಶಃ ಇಪ್ಪತ್ತು ವರ್ಷಗಳ ಹಿಂದೆ? ನನ್ನ ಹೆಂಡತಿ ವರ್ಷಾ ಸಹ ಜೊತೆಗಿದ್ದಳು.

ಮೂಡ್ ಹಿತವಾಯಿತು. ತಂದೂರಿ ಚಿಕನ್ನಿನ ಈ ಹೊಸ ಭೂಮಿಕೆಯಿಂದಾಗಿ ಮನಸ್ಸು ಅರಳಿತು. ರಸ್ತೆಯಲ್ಲಿ ಹಾಡೊಂದನ್ನು ಗುಣಗುಣಿಸುತ್ತಾ ಹೋಗಬೇಕೆಂದು ಮನಸ್ಸಾಯಿತು. ಬಹುಶಃ ಹಾಡಲೂ ಪ್ರಾರಂಭಿಸಿದ್ದೆ, ಹೆಜ್ಜೆಗಳಿಗೆ ಗೆಜ್ಜೆಗಳನ್ನು ಕಟ್ಟಿ ಮೀರಾ ನರ್ತಿಸಿದಂತಾಗಿತ್ತು ನನ್ನ ಸ್ಥಿತಿ... ಆದರೆ ನಾನು ಗೆಜ್ಜೆಗಳಿಲ್ಲದೆ ಕುಣಿದೆ.

ರಾತ್ರಿಯ ಹತ್ತೂವರೆ... ಹನ್ನೊಂದು ಗಂಟೆ. ರಸ್ತೆಯಲ್ಲಿ ಬೋಳು ತಲೆಯ, ಹೂಗಳ ಪ್ರಿಂಟಿನ ಟೀ ಶರ್ಟ್ ಧರಿಸಿದ ನಾನು ಕೆಲವು ಗಂಟೆಗಳ ಮೊದಲು ನನ್ನ ಚಿಂತೆಗಳನ್ನು ಮರೆತು, ಇಪ್ಪತ್ತೊಂದರ ಯುವಕನಂತಾಗಿದ್ದೆ.

ಇದ್ದಕ್ಕಿದ್ದಂತೆ ಮೆದುಳಿನ ಬತ್ತಿ ಹೊತ್ತಿಕೊಂಡಿತು, ಈ ಕಾರಣಕ್ಕಾಗಿಯೇ ನನ್ನ ಮಗನಿಗೆ ಹುಡುಗಿ ಸಿಗುತ್ತಿಲ್ಲ. ಅಕಸ್ಮಾತ್ ಹೊಳೆದ ಈ ಜ್ಞಾನದಿಂದ ನಾನು ಗಾಬರಿಗೊಂಡೆ. ವಾಸ್ತವಿಕತೆ ಒಮ್ಮೊಮ್ಮೆ ಕಹಿಯನ್ನೂ ಉಣ ಬಡಿಸುತ್ತದೆ. ನನ್ನೆದುರು ಅದೆಷ್ಟೋ ವರ್ಷಗಳ ನಂತರ ರಹಸ್ಯವೊಂದು ತೆರೆದುಕೊಂಡಿದೆ ಎಂದು ಅನ್ನಿಸಿತು. ನಾನು ಬೇಗಬೇಗನೆ ರಸ್ತೆಯನ್ನು ದಾಟಿದೆ. ಮನೆಗೆ ಹೋದಾಗ ಜೀತರಾಮ ಹಳೆಯ ಸಿನಿಮಾದ ಹೀರೋನ ಅಪ್ಪನಂತೆ ವರಾಂಡದಲ್ಲಿ ಓಡಾಡುತ್ತಿದ್ದ. ನನ್ನ ಮುಖದಲ್ಲಿದ್ದ ಮುಗುಳ್ನಗೆಯನ್ನು ಕಂಡು ಅವನು ರೇಗಿದ, "ಸಾರ್, ಇದು ಅತಿಯಾಯಿತಲ್ಲ? ಮೊಬೈಲ್ ಜೊತೆಯಲ್ಲಿಟ್ಟುಕೊಳ್ಳುವುದಕ್ಕೆ ಇರುವುದೋ ಅಥವಾ ಚಾರ್ಜಿಂಗಿಗೆ ಮಾತ್ರ ಇಡುತ್ತೀರೋ? ಎಲ್ಲಿಯಾದರೂ ಹೋಗಬೇಕೆಂದಿದ್ದರೆ, ನನ್ನನ್ನೂ ಜೊತೆಗೆ ಕರೆದೊಯ್ಯಬಹುದಿತ್ತಲ್ಲ? ಅಥವಾ ಅಂಶುಲನನ್ನು ಕರೆದೊಯ್ಯ ಬಹುದಿತ್ತಲ್ಲ? ಸಾರ್, ನೀವು ಹೆದರಿಸಿಯೇ ಬಿಡುತ್ತೀರ. ಈ ವಯಸ್ಸಿನಲ್ಲಿ..."

"ಯಾವ ವಯಸ್ಸಿನಲ್ಲಿ ಅಂದೆ? ಇದು ನನ್ನ ಮನೆ, ನನಗಿಷ್ಟಬಂದಂತೆ ಬೇಕಾದಲ್ಲಿಗೆ ಹೋಗ್ತೀನಿ..." ನಾನು ರೇಗಿದೆ.

ಅವನ ಮುಖ ಕನ್‌ಫ್ಯೂಸ್ ಆಗುತ್ತಾ ಫ್ಯೂಸ್ ಆಯಿತು, "ನಿಮ್ಮ ಊಟವನ್ನು ಬಿಸಿ ಮಾಡಲೇ?"

"ಬೇಡ. ನೀನು ಊಟ ಮಾಡು. ನಾಳೆ ಬೆಳಿಗ್ಗೆ ನಾನು ವಾಕ್‌ಗೆ ಹೋಗ್ತೀನಿ. ಐದು ಗಂಟೆಗೆ ಎಬ್ಬಿಸು." ನಾನು ಸ್ಯಾಂಡಲನ್ನು ಸದ್ದು ಮಾಡುತ್ತಾ ನನ್ನ ಕೋಣೆಗೆ ಹೋದೆ.

ಅಂಶುಲನಿಗೆ ಹುಡುಗಿಯನ್ನು ಹುಡುಕಲು ನನ್ನಿಂದ ಯಾಕಾಗುತ್ತಿಲ್ಲ ಎಂಬ ಪ್ರಶ್ನೆಗೆ ನನಗಿನ್ನೂ ಉತ್ತರ ಸಿಕ್ಕಿರಲಿಲ್ಲ. ಇಂದು ಲಾಲಾ ನನ್ನನ್ನು ಒಂದು ಪರಿವಾರಕ್ಕೆ ಕರೆದೊಯ್ದಿದ್ದ; ನಾನು ಬಾಗಿಲೊಳಗೆ ಹೆಜ್ಜೆಗಳನ್ನಿಡುತ್ತಲೇ, ನನ್ನಲ್ಲಿ ಇನ್ನೂ ಯಾವಯಾವ ಮತ್ತು ಎಂತೆಂಥ ಪ್ರಶ್ನೆಗಳನ್ನು ಕೇಳುತ್ತಾರೆ ಎಂಬುದನ್ನು ಅರಿತೆ. ಲಾಲಾ ಮತ್ತು ಇನ್ನಿತರರನ್ನು ಬಿಟ್ಟು ನೇರವಾಗಿ ಹುಡುಗಿಯನ್ನು